ಜಾತಿಪದ್ಧತಿ ನಿರ್ಮೂಲನೆಗೊಳ್ಳುವುದೂ ಇಲ್ಲ, ದೇಶದಲ್ಲಿ ಹೊಸ ಜೀವ ಮೂಡುವುದೂ ಇಲ್ಲ. ಆದ್ದರಿಂದ ಹಿಂದುಳಿದ ಜಾತಿಗಳಿಗೆ ನಾಯಕತ್ವದ ಅವಕಾಶ ಸಿಕ್ಕಲೇಬೇಕೆಂದು ಸಮಾಜವಾದಿ ಪಕ್ಷ ದೃಢ ನಿಶ್ಚಯ ಮಾಡಿದೆ. ಸಾರ್ವಜನಿಕ ಬದುಕಿನಲ್ಲಿ ಕನಿಷ್ಠ ಪಕ್ಷ ಶೇ. 60ರಷ್ಟು ಆಯಕಟ್ಟಿನ ಸ್ಥಾನಗಳನ್ನು ಈ ವರ್ಗಗಳು ಪಡೆಯಬೇಕು. ಈ ಬದಲಾವಣೆಯನ್ನು ಅವಶ್ಯವಿರುವೆಡೆಯಲ್ಲಿ ಕಾನೂನಿನ ರಕ್ಷಣೆಯ ಮೂಲಕ ಕಾರ್ಯರೂಪಕ್ಕೆ ತರಬೇಕು; ಬೇರೆಡೆಯಲ್ಲಿ ಮನೋಧರ್ಮವನ್ನು ಬದಲಾಯಿಸುವುದರ ಮೂಲಕ ತರಬೇಕು.

ಕೆಲ ವರ್ಷಗಳವರೆಗೆ ಈ ಆದ್ಯತೆಯ ಅವಕಾಶವನ್ನು ಬಳಸಿದ ಮೇಲೆ ಹಿಂದುಳಿದ ವರ್ಗಗಳಲ್ಲಿಯೂ ಸಾಮರ್ಥ್ಯಗಳು ರೂಪುಗೊಂಡು ಭಾರತ ಸರ್ವಾಂಗೀಣವಾಗಿ ಬಲಶಾಲಿಯಾಗುತ್ತದೆ. ಶಿಕ್ಷಣದಲ್ಲಿ ಎಲ್ಲ ಜಾತಿಗಳ ಮಕ್ಕಳೂ ಸಮಾನಾವಕಾಶಗಳನ್ನು ಪಡೆಯತಕ್ಕದ್ದು. ಸರಕಾರಿ ಸೇವೆಗಳ ಸಂದರ್ಭದಲ್ಲಿ ಆದ್ಯತಾ ಅವಕಾಶ ಕೊಡಬೇಕಾಗುತ್ತದೆ.'

ಇದೆಲ್ಲದರ ನಡುವೆ ಹಿಂದುಳಿದ ವರ್ಗಗಳ ದೋಷಗಳನ್ನೂ ಲೋಹಿಯಾ ಎತ್ತಿ ತೋರಿಸುತ್ತಿದ್ದರು. ಅದರಲ್ಲೂ ಮುಖ್ಯವಾಗಿ ಶೂದ್ರರ ಹೊಟ್ಟೆಕಿಚ್ಚಿನ ಪ್ರವೃತ್ತಿಯ ಬಗ್ಗೆ, ಶೂದ್ರರು ಇತರ ಶೂದ್ರರನ್ನು ತುಳಿಯುವುದರ ಬಗ್ಗೆ ಒತ್ತಿ ಹೇಳುತ್ತಿದ್ದರು. ಜಾತಿಯೊಳಗೇ ಇದ್ದು ಕೊಳೆತುಹೋದ ಮನಸ್ಸು ತನ್ನ ಜಾತಿಯ ಪ್ರತಿಭಾವಂತರ ಬಗೆಗೂ ಕ್ಷುದ್ರವಾಗಿ ಯೋಚಿಸುತ್ತದೆ ಎಂಬುದು ಲೋಹಿಯಾಗೆ ಗೊತ್ತಿತ್ತು:

'ಇದೀಗ ರೂಪುಗೊಳ್ಳುತ್ತಿರುವ ಹಾಗೂ ನಾಯಕತ್ವ ಪಡೆಯಲೆತ್ನಿಸುತ್ತಿರುವ ಕೆಳಜಾತಿಗಳು ಅಸೂಯೆಯಿಂದ ಮೊದಲು ಮುಕ್ತವಾಗಬೇಕು. ಈ ಅಸೂಯೆಯಿಂದಾಗಿ ಕೆಳಜಾತಿಗಳ ನಾಯಕತ್ವ ಕೆಟ್ಟ ಜನರ ಕೈಗೆ ಜಾರತೊಡಗುತ್ತದೆ.'

ಭಾರತದ ಚರಿತ್ರೆಯ ಈ ನಿರ್ಣಾಯಕ ಘಟ್ಟದಲ್ಲಿ ಲೋಹಿಯಾ ಥರದವರು ತೋರಿದ ದಾರಿಗಳು ಹುಸಿ ಹೋಗಲಿಲ್ಲ! ಚರಿತ್ರೆಯ ಚಕ್ರ ಚಲಿಸಿದಂತೆ ಈ ಕಾರ್ಯಕ್ರಮಗಳೆಲ್ಲ ಜಾರಿಗೆ ಬಂದ ರೀತಿಯನ್ನು ಕಳೆದ ಐವತ್ತು ವರ್ಷದ ಭಾರತದ ಚರಿತ್ರೆಯಲ್ಲಿ ನೋಡಿದ್ದೇವೆ. 1977ರಲ್ಲಿ ದೇವರಾಜ ಅರಸು ನೇತೃತ್ವದ ಕಾಂಗ್ರೆಸ್ ಸರ್ಕಾರ ಹಾವನೂರು ಆಯೋಗದ ವರದಿಯನ್ನು ಜಾರಿಗೊಳಿಸಿದ ನಂತರ ಹಿಂದುಳಿದ ವರ್ಗಗಳಲ್ಲಾದ ಕ್ರಾಂತಿಕಾರಕ ಪರಿಣಾಮ ನಮ್ಮ ಕಣ್ಣೆದುರಿಗೇ ಇದೆ.

ಹಾವನೂರು ವರದಿ ಮುಂದೆ ರಾಷ್ಟ್ರಮಟ್ಟದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮಂಡಲ್ ವರದಿಗೆ ಮಾರ್ಗದರ್ಶಕವಾಯಿತು. 1980ಲ್ಲಿ ಆಯೋಗದ ವರದಿ ಕೊಟ್ಟ ಬಿ.ಪಿ. ಮಂಡಲ್ ಅವರನ್ನು 1965ರಲ್ಲಿ ಸ್ವತಃ ಲೋಹಿಯಾರೇ 'ಸಂಯುಕ್ತ ಸಮಾಜವಾದಿ ಪಕ್ಷ'ದ ಬಿಹಾರ ಘಟಕದ ಅಧ್ಯಕ್ಷರನ್ನಾಗಿ ಮಾಡಿದ್ದರು! ಮುಂದೆ ಕಾಂಗ್ರೆಸ್ ಸೇರಿದ ಮಂಡಲ್, ಬಿಹಾರದ ಮುಖ್ಯಮಂತ್ರಿಯಾದರು; ನಂತರ ಜೆ.ಪಿ. ಸ್ಥಾಪಿಸಿದ ಜನತಾ ಪಕ್ಷಕ್ಕೆ ಹೋದರು.

ಜನತಾ ಪಕ್ಷ 1979ರಲ್ಲಿ ಮಂಡಲ್ ಆಯೋಗ ರಚಿಸಿತು. 1980ರಲ್ಲಿ ಬಿ.ಪಿ. ಮಂಡಲ್ ಹಿಂದುಳಿದ ವರ್ಗಗಳ ಆಯೋಗದ ವರದಿ ಸಲ್ಲಿಸಿದರು. ವಿ.ಪಿ. ಸಿಂಗ್ ಸರ್ಕಾರ 1990ರಲ್ಲಿ ಮಂಡಲ್ ಆಯೋಗವನ್ನು ಜಾರಿ ಮಾಡಿದಾಗ ಪ್ರಕರಣ ಸುಪ್ರೀಂ ಕೋರ್ಟಿಗೆ ಹೋಯಿತು. 1992ರಲ್ಲಿ ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಿತು.

ಇವೆಲ್ಲವೂ ಭಾರತದ ಪ್ರಗತಿಪರ ಚರಿತ್ರೆಯ ರೋಮಾಂಚಕ ಅಂಶಗಳು ಎನ್ನಲು ಕಾರಣಗಳಿವೆ: ಲೋಹಿಯಾ ಕಾಂಗ್ರೆಸ್ಸನ್ನು ವಿರೋಧಿಸಿದ್ದರು; ಮುಂದೆ ಕಾಂಗ್ರೆಸ್ಸು ಲೋಹಿಯಾ ಕನಸನ್ನು ಜಾರಿಗೊಳಿಸಲೇಬೇಕಾದ ಕಾಲ ನಿರ್ಮಾಣವಾಯಿತು! ಅಂಬೇಡ್ಕರ್ ಹಿಂದೂ ಮಹಿಳೆಯರ ಆಸ್ತಿ ಹಕ್ಕನ್ನು ಕುರಿತು ಮಂಡಿಸಿದ ಮಸೂದೆ ಒಂದು ಕಾಲಕ್ಕೆ ಹಿನ್ನಡೆ ಕಂಡಿತ್ತು; ಆದರೆ ಮುಂದೆ ಕರ್ನಾಟಕದಲ್ಲಿ ಮೊಯ್ಲಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಾಗೂ ಕೇಂದ್ರದಲ್ಲಿ ಮನಮೋಹನ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರಗಳು ಮಹಿಳೆಯ ಆಸ್ತಿಯ ಹಕ್ಕನ್ನು ಜಾರಿಗೊಳಿಸಿದವು.

ಅಂಬೇಡ್ಕರ್, ಲೋಹಿಯಾರಂಥ ಧೀಮಂತ ಚಿಂತಕರ ಸಿದ್ಧಾಂತಗಳು, ಕ್ರಿಯೆಗಳು ಭಾರತದ ಚರಿತ್ರೆಯ ಚಕ್ರವನ್ನೇ ಬೇರೆಡೆಗೆ ತಿರುಗಿಸಿದ ರೀತಿಗೆ ಇವೆಲ್ಲ ಅನನ್ಯ ಪುರಾವೆಗಳಂತಿವೆ. ಅಂಬೇಡ್ಕರ್ ಬದಲಿಸಿದ ದಲಿತರ ಚರಿತ್ರೆಯ ಚಕ್ರದ ಜೊತೆಗೇ ಹಿಂದುಳಿದ ವರ್ಗಗಳ, ಮಹಿಳೆಯರ ಚರಿತ್ರೆಯ ಚಕ್ರವೂ ಹೊಸ ದಿಕ್ಕು ಹಿಡಿದ ರೋಮಾಂಚಕ ಘಟ್ಟಗಳಿವು. ನಂತರ ಲೋಹಿಯಾ ಥರದವರು ಮಾಡಿದ ರಾಜಕಾರಣದ ದೂರಗಾಮಿ ಪರಿಣಾಮ ಕೂಡ ನಮ್ಮ ಕಣ್ಣ ಮುಂದೇ ಇದೆ.

ಲೋಹಿಯಾರ ಸಮಾಜವಾದ ಭಾರತದ ದಿನದಿನದ ವಾಸ್ತವಗಳಲ್ಲಿಯೇ ಮೈದಾಳುತ್ತಿತ್ತು; 'ಪಕ್ಷದ ಎಲ್ಲ ಹೊಣೆಗಾರಿಕೆಯಿಂದ ಬಿಡಿಸಿ ಥಿಯರಿ ರೂಪಿಸಲು ನನ್ನನ್ನು ಬಿಡಿ' ಎಂದು ಲೋಹಿಯಾ ಹಿರಿಯ ನಾಯಕರಿಗೆ ಹೇಳಿದ್ದೂ ಉಂಟು. ಆದರೆ ಆ ಲಕ್ಷುರಿ ಲೋಹಿಯಾಗೆ ಸಾಧ್ಯವಿರಲಿಲ್ಲ! ಪಕ್ಷದ ನಿತ್ಯದ ಹೋರಾಟದ ಜೊತೆಗೇ ಲೋಹಿಯಾ ಸಮಾಜವಾದವೂ ರೂಪುಗೊಳ್ಳಬೇಕಾಯಿತು.

ಲೋಹಿಯಾ ಅಮೆರಿಕದಲ್ಲಿದ್ದಾಗ, ಮಿಲ್‌ವಾಕಿ ಪಟ್ಟಣದ ಸೋಷಲಿಸ್ಟರು, 'ಇಲ್ಲಿನ ಜನ ತೀರಾ ಸಂತೃಪ್ತರಾಗಿದ್ದಾರೆ. ಮುಂದಾದರೂ ಅವರಿಗೆ ನಿರುದ್ಯೋಗ ಬಂದು ತಿವಿಯಲಿ, ಆಗ ಅವರು ಸೋಷಲಿಸಮ್ಮಿನ ಸಂದೇಶವನ್ನು ಕೇಳಿಯಾರು' ಎಂದು ಗೊಣಗುತ್ತಾರೆ. ಆಗ 'ಸಮಾಜವಾದ ಬಡತನದ ಧರ್ಮವಷ್ಟೇ ಆಗಬಾರದು' ಎಂದ ಲೋಹಿಯಾ, 'ಸಮಾನತೆ+ಪ್ರಾಸ್ಪರಿಟಿ= ಸಮಾಜವಾದ' ಎಂದು ಮುಂದೊಮ್ಮೆ ವಿವರಿಸಿದರು.

ಕಮ್ಯುನಿಸಂಗಿಂತ ಭಿನ್ನವಾಗಿ ಸಮಾಜವಾದವನ್ನು ವಿವರಿಸಿಕೊಳ್ಳುವ ನಿಟ್ಟಿನಲ್ಲಿ ಲೋಹಿಯಾ ಯೋಚಿಸುತ್ತಿದ್ದರು. ಭಾರತದ ವಿಚಿತ್ರವೆಂದರೆ, ಇಲ್ಲಿ ಒಂದು ಥರದ ಅಸಮಾನತೆಯನ್ನು ಹೋಗಲಾಡಿಸಿದರೆ ಮತ್ತೊಂದು ಥರದ ಅಸಮಾನತೆ ಹೆಡೆಯೆತ್ತುತ್ತಿತ್ತು. ಭಾಷೆ, ಜಾತಿ, ಜನರ ಆದಾಯ–ವೆಚ್ಚಗಳಲ್ಲಿರುವ ಅಂತರ ಇವೆಲ್ಲವೂ ಜನರ ಮಧ್ಯೆ ಅಗಾಧ ಅಂತರ ಸೃಷ್ಟಿಸುತ್ತಿದ್ದವು. ಈ ಅಂತರಗಳ ಮೂಲ ಹುಡುಕುತ್ತಾ ಲೋಹಿಯಾ ಬರೆದರು:

'ಎಲ್ಲ ದೇಶಗಳಲ್ಲೂ ಆಳುವ ವರ್ಗಗಳಿರುತ್ತವೆ. ಆದರೆ ಯಾವ ದೇಶದಲ್ಲೂ ಹಾಗೂ ಯಾವ ಕಾಲದಲ್ಲೂ ಭಾರತದಲ್ಲಿರುವಷ್ಟು ಜಡವಾದ ಹಾಗೂ ಅಧಿಕಾರ ಸ್ಥಾನಗಳಿಗೆ ಸುಭದ್ರವಾಗಿ ಆತುಕೊಂಡ ಆಳುವ ವರ್ಗ ಇದ್ದಂತಿಲ್ಲ.

ಭಾರತದ ಆಳುವ ವರ್ಗಗಳ ಮೂರು ವಿಶಿಷ್ಟ ಲಕ್ಷಣಗಳು ಇವು: 1. ಮೇಲುಜಾತಿ, 2. ಇಂಗ್ಲಿಷ್ ಶಿಕ್ಷಣ, 3. ಹಣ.

ಈ ಮೂರರಲ್ಲಿ ಎರಡು ಇದ್ದವನು ಕೂಡ ಆಳುವ ವರ್ಗದ ಸದಸ್ಯನಾಗಿರುತ್ತಾನೆ. 'ಹಣ ಹಾಗೂ ಶಿಕ್ಷಣ ಇವೆರಡೂ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು, ಹಾಗೂ ಅವು ಬದಲಾಗುವಂಥವು' ಎಂದು ಕೆಲವರು ಹೇಳಬಹುದು. ಆದರೆ ವಾಸ್ತವದಲ್ಲಿ ಹಾಗಿಲ್ಲ. ಈ ಮೂರರಲ್ಲಿ ಒಂದಂಶವಾಗಿರುವ ಮೇಲು ಜಾತಿ ಇಡೀ ಸ್ಥಿತಿ ಚಲಿಸದಂತೆ ಮಾಡಿ ಮರಗಟ್ಟಿಸುತ್ತದೆ. ಕಾರಣ, ಈ ದೇಶದ ಆಳುವ ವರ್ಗಗಳ ಶೇಕಡ ತೊಂಬತ್ತರಷ್ಟು ಜನ ಮೇಲುಜಾತಿಯವರು. ಅವರಲ್ಲಿ ಬಹುತೇಕರು ಇಂಗ್ಲಿಷ್ ಹಾಗೂ ಹಣ ಈ ಎರಡೂ ಲಕ್ಷಣಗಳನ್ನು ಪಡೆದವರು. ಇದೇ ವರ್ಗದ ಇನ್ನು ಕೆಲವರಲ್ಲಿ ಇವುಗಳಲ್ಲಿ ಯಾವುದಾದರೂ ಒಂದು ಇದ್ದೇ ಇರುತ್ತದೆ.'

ಅದೇ ವೇಳೆಗೆ ಭಾರತೀಯ ಭಾಷೆಗಳನ್ನು ಉಳಿಸಲು ಇಂಗ್ಲಿಷ್ ದಬ್ಬಾಳಿಕೆಯನ್ನು ಎದುರಿಸುವ ಸವಾಲೂ ಲೋಹಿಯಾ ಎದುರಿಗಿತ್ತು. ಆಗ ಸಮಾಜವಾದಿ ಪಕ್ಷ ಶುರು ಮಾಡಿದ 'ಅಂಗ್ರೇಜಿ ಹಟಾವೋ' ಚಳುವಳಿ ಜನ ಭಾಷೆಗಳ ಪರವಾದ ಚಳುವಳಿಯೂ ಆಗಿತ್ತು:

'ಇಂಗ್ಲಿಷ್ ಭಾಷೆ ಭಾರತೀಯ ಸಂದರ್ಭದಲ್ಲಿ ಪಾಳೆಗಾರಿಕೆಯ ಭಾಷೆಯಾಗಿದೆ ಎನ್ನುವ ಕಾರಣದಿಂದ ಹೆಚ್ಚು ಹಾನಿಕಾರಕವಾಗಿದೆ. ಈ ಭಾಷೆಯನ್ನು ಅಧಿಕಾರಕ್ಕೋಸ್ಕರ ಅಥವಾ ಧನಲಾಭಕ್ಕೋಸ್ಕರ ಬಳಸಿಕೊಳ್ಳಲು ಬೇಕಾದ ಪ್ರೌಢಿಮೆಯನ್ನು ಪಡೆದುಕೊಳ್ಳಬಲ್ಲವರು ನಮ್ಮಲ್ಲಿ ಶೇಕಡ ಒಂದರಷ್ಟು ಮಾತ್ರ ಇದ್ದಾರೆ. ಈ ಅತ್ಯಲ್ಪ ಸಂಖ್ಯೆಯ ಕಿರುಗುಂಪಿಗೆ, ಬಹುಸಂಖ್ಯೆಯ ಜನಸಮೂಹದ ಮೇಲೆ ಯಾಜಮಾನ್ಯವನ್ನು ಸ್ಥಾಪಿಸಿ ಶೋಷಣೆ ನಡೆಸುವುದಕ್ಕೆ ಇಂಗ್ಲಿಷ್ ಒಂದು ಸಾಧನವಾಗಿದೆ.'

ವಿಚಿತ್ರವೆಂದರೆ, ಲೋಹಿಯಾರ 'ಇಂಗ್ಲಿಷ್ ತೊಲಗಿಸಿ' ಚಳುವಳಿ ಕೆಲವರಿಗೆ ಹಿಂದಿ ಪರವಾದ ಚಳುವಳಿ ಎಂಬಂತೆ ಕಾಣತೊಡಗಿತು. ತಮಿಳುನಾಡಿನಲ್ಲಿ ಅವರ ಮೇಲೆ ಹಲ್ಲೆಯ ಪ್ರಯತ್ನವೂ ಆಯಿತು.

ಇದು ಭಾರತದ ದುರಂತ. ಯಾರು ಯಾರ ಪರವಾಗಿದ್ದಾರೆ ಎಂಬುದನ್ನೇ ತಿಳಿಯದೆ ಇಲ್ಲಿ